ಬಳ್ಳಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಮಾಹಿತಿಗೆ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟ, ಬಣ್ಣದ ಮನೆ, ಬಿಎಸ್‌ಎನ್‌ಎಲ್ ಕಚೇರಿ ಬಳಿ, ರಾಮಸಮುದ್ರ, ಚಾಮರಾಜನಗರ, ದೂರವಾಣಿ ಸಂಖ್ಯೆ –9448266268, 9916115263 ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

## ಬಲಿಜ ಮಾಹಿತಿ ಗ್ರಂಥ

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬಲಿಜ ಜನಾಂಗದ ಪ್ರತಿಭಾನ್ವಿತರನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶದಿಂದ ಬಲಿಜಾಭಿಮಾನಿ ಸಾಧಕರ ಗ್ರಂಥ ಹೊರತರಲು ದಿವ್ಯಜ್ಞಾನಿ ಯೋಗಿ ನಾರೇಯಣ ಸಂಸ್ಕೃತಿ ಜ್ಞಾನ ಪ್ರಚಾರ ಕೇಂದ್ರ ನಿರ್ಧರಿಸಿದೆ.

ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಬಲಿಜ ಪ್ರತಿಭಾನ್ವಿತರು ತಮ್ಮ ಸಾಧನೆ ಸ್ವ ವಿವರಗಳೊಂದಿಗೆ ಇತ್ತೀಚಿನ ಮೂರು ಭಾವಚಿತ್ರಗಳನ್ನು ಡಿ. 30ರೊಳಗೆ ಕಳುಹಿಸಲು ಕೇಂದ್ರ ಮನವಿ ಮಾಡಿದೆ.

ಮಾಹಿತಿಗೆ ಶ್ರೀ ದಿವ್ಯಜ್ಞಾನಿ ಯೋಗಿ ನಾರೇಯಣ ಸಂಸ್ಕೃತಿ ಜ್ಞಾನ ಪ್ರಚಾರ ಕೇಂದ್ರ, ನಂ.9, ಸಂಚಯ, ನಂಜರಸಪ್ಪ ಬಡಾವಣೆ, ಕೆನರಾ ಬ್ಯಾಂಕ್ ಕಾಲೋನಿ, ನಾಗರಬಾವಿ ರಸ್ತೆ, ಬೆಂಗಳೂರು–12, ದೂರವಾಣಿ ಸಂಖ್ಯೆ 9480051386 ಇಲ್ಲಿಗೆ ಸಂಪರ್ಕಿಸಲು ಕೋರಲಾಗಿದೆ.



ಆಯುಷ್ ಇಲಾಖೆ ಬೆಂಗಳೂರಿನಲ್ಲಿ ಏರ್ಪಡಿಸಿರುವ 4ನೇ ಆಯುರ್ವೇದ ಕಾಂಗ್ರೆಸ್ ಸಮ್ಮೇಳನದ ... ಸಂರಕ್ಷಣೆ, ಬೆಳವಣಿಗೆ ಹಾಗೂ ಸಂಗ್ರಹಣೆ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅ... ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಮತ್ತಿತರರು ಭಾಗವಹಿಸಿದ್ದರು.

## ವರದಕ್ಷಿಣೆ ಕಿರುಕುಳ ಕಾಯ್ದೆ: ಜನಾಭಿಪ್ರಾಯಕ್ಕೆ ಮನವಿ

ಬೆಂಗಳೂರು: ವರದಕ್ಷಿಣೆ ಕಿರುಕುಳ ಸೇರಿದಂತೆ ಮಹಿಳಾ ರಕ್ಷಣೆಗಾಗಿ ರೂಪಿಸಲಾಗಿರುವ 498ಎ ಕಾಯ್ದೆ ದುರ್ಬಳಕೆ ತಡೆಯುವ ಹಿನ್ನೆಲೆಯಲ್ಲಿ ಸಂಸತ್ ನೀಡಿರುವ ಅವಕಾಶದ ಮೇರೆಗೆ ಸಾರ್ವಜನಿಕರು ಅಭಿಪ್ರಾಯ ಸಲ್ಲಿಸಬೇಕು ಎಂದು ನ್ಯಾಷನಲ್ ಫ್ಯಾಮಿಲಿ ಹಾರ್ಮೋನಿ ಸೊಸೈಟಿ ಮನವಿ ಮಾಡಿದೆ.

ಈ ಕಾಯ್ದೆ ದುರುಪಯೋಗ ಆಗುತ್ತಿದ್ದು ಅದನ್ನು ತಡೆಯುವ ದೃಷ್ಟಿಯಿಂದ ತಿದ್ದುಪಡಿಗೆ ಸಾರ್ವಜನಿಕರು ಅಭಿಪ್ರಾಯ ಸಲ್ಲಿಸುವ ವಿಶೇಷ ಅವಕಾಶ ಸಂಸತ್ ಕಲ್ಪಿಸಿದ್ದು ಅದನ್ನು ಎಲ್ಲರೂ ಸದುಪಯೋಗ ಪಡಿಸಿಕೊಳ್ಳುವ ಮೂಲಕ ಈ ಕಾಯ್ದೆಯಲ್ಲಿರುವ ಕೆಲವು ಲೋಪ–ದೋಷಗಳನ್ನು ಸರಿಪಡಿಸಲು ಸಹಕರಿಸಬೇಕು ಎಂದು ಸೊಸೈಟಿಯ ಕಾರ್ಯ ನಿರ್ವಾಹಕ ಸದಸ್ಯ ಉಮೇಶ್ ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

ವರದಕ್ಷಿಣೆ ಕಿರುಕುಳ ಸೇರಿದಂತೆ ಇನ್ನಿತರ ಕೌಟುಂಬಿಕ ದೌರ್ಜನ್ಯಗಳ ಹಿನ್ನೆಲೆಯಲ್ಲಿ ಮಹಿಳೆಯರಿಗೆ ರಕ್ಷಣೆ ನೀಡಲೆಂದೇ ಈ ಕಾಯ್ದೆ ರೂಪಿಸಲಾಗಿದೆ. ಆದರೆ ಕಾಯ್ದೆಯ ಉದ್ದೇಶ ನಿಜವಾದ ಮೌಲ್ಯವನ್ನೇ ಕಳೆದುಕೊಂಡಿದ್ದು ಉಪಯೋಗಕ್ಕಿಂತ ದುರ್ಬಳಕೆ ಹೆಚ್ಚುತ್ತಿದೆ ಎಂಬ ಹಿನ್ನೆಲೆಯಲ್ಲಿ ಸಂಸತ್ ತಿದ್ದುಪಡಿ ತರಲು ನಿರ್ಧರಿಸಿದ್ದು, ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸಲಿದೆ ಎಂದು ತಿಳಿಸಿದರು.

## ಲೆನಿ...

ಬೆಂಗಳೂರು: ಬ...
ಪ್ರಕರಣಕ್ಕೆ ಸಂ...
ಲೆನಿನ್ ಸೇರಿದ...
ಒಳಪಡಿಸಬೇಕೆಂ...
ಶನಿವಾರ ಒತ್ತಾ...
ಪ್ರಕರಣಕ್ಕೆ ...
ಹೇಳಿಕೆ ನೀಡು...
ಕೊಡುತ್ತಿದ್ದಾನೆ. ...
ಒಳಪಡಿಸಿದರ...
ಎಂಬುದು ಸ...
ಶಿಷ್ಯಂದಿರಾದ ...
ಭಕ್ತಾನಂದ ಪತ್ರಿ...
ಸ್ವಾಮೀಜಿ ...
ನಡೆಯುತ್ತಿದ್ದು ...
ಸಾಕ್ಷ್ಯಾಧಾರಗಳಿ...
ದೂರು ಅನು...
ದಿನಕ್ಕೊಂದೊಂದ...

ಶಾಲಾ ಸಮವಸ್ತ್ರ

# ಶಿಕ್ಷಣ ಇಲಾಖೆ- ಕೈಮ...

ರುದ್ರಣ್ಣ ಹರ್ತಿಕೋಟೆ

ಬೆಂಗಳೂರು: ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಾಲೆಯ ಮಕ್ಕಳಿಗೆ ನೀಡುವ ಸಮವಸ್ತ್ರಗಳನ್ನು ಸರಬರಾಜು ಮಾಡುವ ವಿಚಾರದಲ್ಲಿ ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನಡುವೆ 'ಜಟಾಪಟಿ' ಆರಂಭವಾಗಿರುವುದು ಸರ್ಕಾರದ ಪಾಲಿಗೆ ಹೊಸ ತಲೆನೋವಿನ ಸಂಗತಿಯಾಗಿದೆ.

ಶಿಕ್ಷಣ ಇಲಾಖೆ ಮೈಸೂರು ವಿಭಾಗದ ಮಕ್ಕಳಿಗೆ ಅಗತ್ಯವಾದ ಸಮವಸ್ತ್ರಗಳನ್ನು ನೇರವಾಗಿ ತಾನೇ ಟೆಂಡರ್ ಕರೆಯುವ ಮೂಲಕ ಖರೀದಿಗೆ ಮುಂದಾಗಿರುವುದೇ ಈಗ 'ವಿವಾದ'ದ ಕೇಂದ್ರ ಬಿಂದು. ಕೈಮಗ್ಗ ನಿಗಮ ಈಗ ತನಗೆ ತಪ್ಪುತ್ತಿರುವ ವ್ಯಾಪಾರವನ್ನು ಮತ್ತೆ ಕೊಡಿಸುವಂತೆ ಮುಖ್ಯಮಂತ್ರಿ ಅವರ ಮೊರೆ ಹೋಗಿದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಇದುವರೆಗೂ ಗುಲ್ಬರ್ಗ, ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಮಕ್ಕಳಿಗೆ ಸಮವಸ್ತ್ರಗಳನ್ನು ಪೂರೈಸುತ್ತಿತ್ತು. ಕರ್ನಾಟಕ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ಬೆಳಗಾವಿ ವಿಭಾಗಕ್ಕೆ ಪೂರೈಸುತ್ತಿತ್ತು. ಕಳೆದ ಹಲವು ವರ್ಷಗಳಿಂದ ಇದೇ ಪದ್ಧತಿ ಇತ್ತು. ನೇಕಾರರು ಮತ್ತು ನಿಗಮಗಳ ನೌಕರರು ಉಳಿಯಲಿ ಎಂಬ ಕಾರಣಕ್ಕಾಗಿ ಸರ್ಕಾರ ಈ ಎರಡು ನಿಗಮಗಳಿಂದಲೇ ಸಮವಸ್ತ್ರಗಳನ್ನು ಸರಬರಾಜು ಮಾಡಲಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮ ಸರಿಯಾದ ಸಮಯಕ್ಕೆ ಸಮವಸ್ತ್ರಗಳನ್ನು ಪೂರೈಸುತ್ತಿರಲಿಲ್ಲ.

ಕೈಮಗ್ಗಗಳ ಅಭಿವೃದ್ಧಿ ನಿಗಮ ಗುಲ್ಬರ್ಗ ವಿಭಾಗದಲ್ಲಿ 14 ಲಕ್ಷ

- ಮೈಸೂರು ವಿಭಾ... ನೇರ ಖರೀದಿ
- ನಿಗಮಕ್ಕೆ ಕೈತಪ್ಪು... 14 ಕೋಟಿ ರೂ...
- ಮುಖ್ಯಮಂತ್ರಿ ... ಹೋಗಿರುವ ನಿ...

ಸೆಟ್ ಸಮವಸ್ತ್ರಗಳನ್ನು ಸರಬ... ಲಕ್ಷ ಮೀಟರ್ ಬಟ್ಟೆ ಬಳಸಿದರ... ಬೆಂಗಳೂರು ವಿಭಾಗದಲ್ಲಿ 16 ... ಬಟ್ಟೆ ಬಳಸಿದರೆ, 18.75 ಕೋ... ವಿಭಾಗದಲ್ಲಿ 13 ಲಕ್ಷ ಸೆಟ್‌ಗಳಿ... ಮತ್ತು ವೆಚ್ಚ 14 ಕೋಟಿ ರೂ.ಗ... ಗಳ ವಹಿವಾಟು ತಪ್ಪುತ್ತಿದೆ.

ರಾಜ್ಯದಲ್ಲಿರುವ ಸುಮಾ... ಕುಟುಂಬಗಳಿಗೆ ಸಮವಸ್ತ್ರ... ಉದ್ಯೋಗ. ಉಳಿದಂತೆ ... ತನ್ನ ಮಾರಾಟ ಕೇಂದ್ರಗಳ...

### ಮುಖ್ಯಮಂತ್ರಿಗಳೇ ತೀರ್ಮಾನಿಸಲಿ



ನಿಗಮವನ್ನು ಬಿಟ್ಟು ನೇರವಾಗಿ ಟೆಂಡರ್ ಕರೆದರೆ ಬೇರೆಯವರು ಲಾಭ ಮಾಡಿಕೊಳ್ಳುತ್ತಾರೆ. ನಿಗಮ ಇರುವುದು ನೇಕಾರರಿಗೆ ಅನುಕೂಲ ಮಾಡಿಕೊಡಲು. ಮೈಸೂರು ವಿಭಾಗಕ್ಕೂ ಸರಬರಾಜು ಮಾಡುವ ಹೊಣೆ ನೀಡಿ ಎಂದು ಕೋರಿದ್ದೇವೆ. ಸಿಎಂ ತೀರ್ಮಾನಕ್ಕೆ ಎದುರು ನೋಡುತ್ತಿದ್ದೇವೆ.

–ಎಂ.ಡಿ. ಲಕ್ಷ್ಮೀನಾರಾಯಣ
ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ

### ನಿಗಮಕ್ಕೇನೂ ತೊಂದರೆ ಇಲ್ಲ



ನಾವು ನೇರವಾಗಿ ಟೆಂಡರ್ ಕರೆಯುವುದರಿಂದ ಸರ್ಕಾರಕ್ಕೆ ಹಣ ಉಳಿತಾಯವಾಗುತ್ತದೆ. ನಿಗಮಕ್ಕೂ ತೊಂದರೆ ಇಲ್ಲ. ಅವರು ನೇರವಾಗಿ ಸರಬರಾಜು ಮಾಡುತ್ತಿದ್ದಷ್ಟು ಸಮವಸ್ತ್ರವನ್ನು ಈಗಲೂ ಅವರೇ ಪೂರೈಸುತ್ತಾರೆ. ಹೊರಗಡೆಯಿಂದ ಖರೀದಿ ಮಾಡುತ್ತಿದ್ದುದನ್ನು ನಾವು ಖರೀದಿ ಮಾಡುತ್ತೇವೆ ಅಷ್ಟೇ.

–ವಿಶ್ವೇಶ್ವರ ಹೆಗಡೆ ಕಾಗೇರಿ
ಪ್ರಾಥಮಿಕ– ಪ್ರೌಢ ಶಿಕ್ಷಣ ಸಚಿವ